Q.P. Code – 32205

# Second Semester B.Com./B.B.M./B.H.M. Degree Examination, April/May 2019

*(CBCS – Semester Scheme)*

## ಕನ್ನಡ ಭಾಷೆ

## Paper II – ಕಾವ್ಯನಂದನ – ೨, ಆಧುನಿಕ ಕನ್ನಡ ಕವಿತೆಗಳು ಮತ್ತು ಆಯ್ದ ಸಣ್ಣ ಕತೆಗಳು

*Time : 3 Hours]* *[Max. Marks : 90*

### ಭಾಗ – 1

### ಆಧುನಿಕ ಕನ್ನಡ ಕವಿತೆಗಳು

I. (ಅ) ಒಂದು ಪದ್ಯದ ಸ್ವಾರಸ್ಯವನ್ನು ಬರೆಯಿರಿ : **(1 × 6 = 6)**

1. ಕೈಲಾಗದವರೆಂಬ ನಾವು ಕೀಳೆಂದೆಂಬ
   ಹಣೆ ಬರಹವೆಂದೆಂಬ ಮೂಢತೆಯ ನೀಗಿ
   ಯುಗ ಚಕ್ರ ಪರಿವರ್ತನೆಗೆ ಸರ್ವರೂ ಸೇರಿ
   ಹೆಗಲು ಕೊಟ್ಟೊಮ್ಮನಸು ಮಾಡಿ ನೆರವಾಗಿ!

2. ಆದರೆ
   ಪಿತ್ರಾರ್ಜಿತ ಗುಡಿಸಲ ಹರಕು ಗೋಡೆಯ ಮೇಲೆ
   ಅ. ಆ ಮೂಡಿಸಿದಾಗ ಅಂದು
   ಅವ್ವ ಕೊಟ್ಟ ಮುತ್ತುಗಳು ಕೆನ್ನೆ ಮೇಲೆ ಇನ್ನೂ ಇವೆ
   ಅಪ್ಪ ಕೊಟ್ಟ ತೂತುಕಾಸು ಉಡುದಾರದಲ್ಲಿ ಹಾಗೇ ಇದೆ.

(ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ : **(3 × 3 = 9)**

1. ಸಾಯ ಬಲ್ಲೆನೆ ನಾನು ಪಾಪಿ! ಅಯ್ಯೊ! ಪಾಪಿಗೆ ಸಾವು ಬಹುದೆ?
2. ತಣ್ಣನ್ನ ಜೋಮಾಲಿ ಕೊರಳೊಳಗಿತ್ತೋ.
3. ಬತ್ತಿ ಹೋಗಲಿ ಗಂಗೆಯೊಂದು ಸಲ ತಳಬಿರಿದು
4. ಮರುಮಾತಿಲ್ಲದೆ ಪಣಕ್ಕೆಡಿಗಿಕೊಂಡಿರಲ್ಲೇ

(ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : **(2 × 5 = 10)**

1. ಬಿ.ಎಂ.ಶ್ರೀ
2. ಭಾಗವತರು
3. ಚಂದ್ರಶೇಖರ ಕಂಬಾರ

(ಈ) ಒಂದು ವಾಕ್ಯದಲ್ಲಿ ಉತ್ತರಿಸಿ : (5 × 1 = 5)

1. ಚೆನ್ನಿ ಯಾರನ್ನು ಮದುವೆಯಾದಳು?
2. ನಾಮದ ಮೇಷ್ಟರ ಕಾಲಿಗೆ ಬಿದ್ದವರು ಯಾರು?
3. ಗಂಗೆಯನ್ನು ಭೂಮಿಗೆ ತಂದವರು ಯಾರು?
4. ಅಹಲ್ಯೆಗೆ ಏನೆಂದು ಶಾಪ ನೀಡಲಾಗಿತ್ತು?
5. ಕನ್ನಡಿಯಲ್ಲಿ ಇಟುಕಿ ನೋಡಿದ ಪ್ರಾಣಿಗಳಾವುವು?

II. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (2 × 10 = 20)

1. 'ಕರುಣೆ ಒಲವಿಗೆ ಎಂದೂ ಪರ್ಯಾಯವಲ್ಲ' – ಈ ಮಾತು 'ನನ್ನ ನಾಯಿ' ಕವಿತೆಯಲ್ಲಿ ಹೇಗೆ ಮೂಡಿ ಬಂದಿದೆ? ವಿವರಿಸಿ.
2. ಪುರುಷ ಸಮಾಜದ ಖಂಡನೆ ನನ್ನ 'ಅವತಾರ' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿ.
3. ಆಧುನಿಕ ಮನುಷ್ಯನ ಸಾಧನೆ 'ಪುರುಷ ಸೂಕ್ತ' ಕವಿತೆಯಲ್ಲಿ ಹೇಗೆ ಅನಾವರಣಗೊಂಡಿದೆ? ವಿವರಿಸಿ.

## ಭಾಗ – 2

## ಸಣ್ಣ ಕಥೆಗಳು

III. (ಅ) ಒಂದರ ಸ್ವಾರಸ್ಯವನ್ನು ಬರೆಯಿರಿ : (1 × 5 = 5)

1. "ಒಂದು ನಿಮಿಷ ತಡೆಯಿರಿ, ನೀವು ಹೇಳಿದ ಆ ಸುಡುಗಾಡು ಚೈನೀ ಮಂತ್ರ ಯಾಕೋ ತಲೆಗೆ ಹೊಳೆಯುತ್ತಿಲ್ಲ" ಎಂದು ಗಾಬರಿ ಸ್ವರದಲ್ಲಿ ಕೂಗಿದೆ, ನನ್ನ ಮಾತು ಕೇಳಿ ಷಾ" ಅಯ್ಯೋ ನೀವೇ ನೇನ್ರಿ! ಥುಕ್' ಎಂದರು ತಾತ್ಸಾರದಿಂದ, ನಾನು ದೆವ್ವವಲ್ಲ ಒರಿಜನಲ್ ಮನುಷ್ಯ ಎಂದು ತಿಳಿದು ಅವರಿಗೆ ಆಶಾಭಂಗವಾಗಿರಬೇಕು.

2. "ಏನಂದ್ರಿ?.... ಏನಂದ್ರೀ? ನಾನು ಮಸೀದಿಗೆ ಹೋಗಿ ಆ ನೀಚರ ಕೈಯಿಂದ ಪೆಟ್ಟು ತಿನ್ನ ಬೇಕೆ? ಯಾವ ತಪ್ಪಿಗಾಗಿ? ನನ್ನ ಮಗಳನ್ನು ಆ ಮುದುಕನ ಕೊರಳಿಗೆ ಕಟ್ಟಲೊಪ್ಪದ ತಪ್ಪಿಗಾಗಿಯೇ? ಮಸೀದಿಗೆ ಹೋಗಿ ಪೆಟ್ಟು ತಿಂದು ನಾನು ಮಾಡದ ತಪ್ಪನ್ನು ಒಪ್ಪಿಕೊಳ್ಳಲೇ? ನೀವು ನಿಮ್ಮ ಮೆದುಳನ್ನು ಒತ್ತೆಯಿಟ್ಟು ಬಂದಿದ್ದೀರಾ? ನಿಮ್ಮಿಂದಾಗದಿದ್ದರೆ ಹೇಳಿ, ಪೋಲೀಸ್ ಸ್ಟೇಶನ್ನಿಗೆ ನಾನೇ ಹೋಗಿ ದೂರು ಕೊಡುತ್ತೇನೆ".

(ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ : (3 × 2 = 6)

1. ನಿಂಗೊಂದು ಹಿರೀ ಅಣ್ಣ ಇತ್ತು ಮಗಾ............
2. ನಿನ್ನೆ ರಾತ್ರಿ ಎರಡು ಗಂಟೆಗೆ ಷುರುವಾಯ್ತು
3. ಪಾಪ ಎಷ್ಟು ಸಜ್ಜನನಪ್ಪ!
4. ಅವ್ರಿಗೇನು ದುಡ್ಡಿಗೆ ಸಂಕಟವಾ?

(ಇ) ಒಂದಕ್ಕೆ ಟಿಪ್ಪಣಿ ಬರೆಯಿರಿ : **(1 × 4 = 4)**

1. ನಾಗರ ಬೆತ್ತ
2. ಕಪ್ಪು ಕಲ್ಲಿನ ಸೈತಾನನ ಕತೆಯಲ್ಲಿನ ಮಾನವೀಯತೆ

(ಈ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ಕುಂಞ ಪಾತಮ್ಮಳ ಹಿರಿಯ ಮಗಳ ಹೆಸರೇನು?
2. ಮದುವೆಗೆ ಕುದುರೆ ಮೆರವಣಿಗೆಯನ್ನು ನಿಯೋಜಿಸಿದವರು ಯಾರು?
3. 'ಧರ್ಮ ಬಲೆ ಬೀಸಿದಾಗ' ಕತೆಯ ಲೇಖಕರ ಹೆಸರೇನು?
4. ವೆಂಕಟಿಗನ ಹೆಂಡತಿ ಯಾರ ಮೋಹಕ್ಕೆ ಸಿಲುಕಿದಳು?
5. ಅಬ್ಬಕ್ಕನ ಹಿರಿಯ ಮಗನ ಹೆಸರೇನು?

IV. ಎರಡು ಪ್ರಶ್ನೆಗಳಿಗೆ ಉತ್ತರಿಸಿ : **(2 × 10 = 20)**

1. ವೆಂಕಟಿಗನು ತನ್ನ ಔದಾರ್ಯ ಮತ್ತು ಅಂತಃಕರಣಗಳಿಂದ ಹೆಂಡತಿಯನ್ನು ಬರಮಾಡಿಕೊಂಡ ಬಗೆಯನ್ನು ವಿವರಿಸಿ.
2. 'ತಾಯಿ' ಕಥೆಯಲ್ಲಿ ಮಾತೃ ಹೃದಯದ ಅಬ್ಬಕ್ಕನು ಪಡುವ ವೇದನೆ ಹೇಗೆ ವ್ಯಕ್ತವಾಗಿದೆ? ವಿಚಾರ ಮಾಡಿ.
3. ದೆವ್ವದ ಕಾಟ ಎಂದು ಜನರನ್ನು ನಂಬಿಸಿ ಮುತ್ತಣ್ಣ ಸಿಕ್ಕ ಬಿದ್ದ ಪ್ರಸಂಗವನ್ನು ಕುರಿತು ಬರೆಯಿರಿ.